ಒಂದೇ ಸೂರಿನ ಅಡಿ ಚಿಕಿತ್ಸೆ

3267 (3676); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಒಂದೇ ಸೂರಿನ ಅಡಿ ಎಲ್ಲಾ ವಿಧದ ವೈದ್ಯಕೀಯ ಚಿಕಿತ್ಸೆ ನೀಡುವ ಕಾರ್ಯ ಜಾರಿಗೆ ತರಲಾಗಿದೆಯೇ; (ವಿವರ ನೀಡುವುದು);

ಆ) ಇಲ್ಲಿ ದೊರೆಯುವ ಚಿಕಿತ್ಸೆಗಳು ಯಾವುವು; (ಪ್ರತ್ಯೇಕವಾಗಿ ವಿವರ ನೀಡುವುದು);

ಇ) ಈ ಸೇವೆಗಳಿಗೆ ಮುಂಬೈನ ಟಾಟಾ ಸ್ಮಾರಕ ಆಸ್ಪತ್ರೆ ಮಾದರಿಯೇ; ಅಲ್ಲಿಯ ಯಾವ ಯಾವ ಅಂಶವನ್ನು ಈ ಯೋಜನೆಗೆ ಅಳವಡಿಸಿಕೊಳ್ಳಲಾಗಿದೆ;

ಈ) ಹೊರ ರೋಗಿಗಳಾಗಿ ಬರುವವರು ಬಂದೇ ದಿನದಲ್ಲಿ ಎಲ್ಲಾ ವೈದ್ಯರನ್ನು ಭೇಟಿ ಮಾಡಿ ಹಿಂತಿರುಗುವ ವ್ಯವಸ್ಥೆ ಕಿದ್ವಾಯಿ ಆಸ್ಪತ್ರೆಯಲ್ಲಿ ಜಾರಿಗೆ ಬಂದಿದೆಯೇ; ಅದು ಎಷ್ಟು ಯಶಸ್ಸು ಕಂಡಿದೆ;

ಉ) ಹಾಗಿದ್ದಲ್ಲಿ, ಯೋಜನೆ ಉದ್ಘಾಟನೆಯಾದ ನಂತರದಿಂದ ಸೇವೆ ಪಡೆದವರ ಸಂಖ್ಯೆ ಎಷ್ಟು?

ಡಾ॥ ಶರಣಪ್ರಕಾಶ ಆರ್. ಪಾಟೀಲ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಒಂದೇ ಸೂರಿನ ಅಡಿ ಎಲ್ಲಾ ವಿಧದ ವೈದ್ಯಕೀಯ ಚಿಕಿತ್ಸೆ ನೀಡುವ ಕಾರ್ಯ ಜಾರಿಗೆ ತರಲಾಗಿದೆ. ರೋಗಿಗಳಿಗೆ ಅರ್ಬುದ ರೋಗವು ದೃಢಪಟ್ಟ ನಂತರ ಅವರ ಖಾಯಿಲೆಯ ಹಂತದ ಆಧಾರದ ಮೇಲೆ ನುರಿತ ವೈದ್ಯರುಗಳ ಸಲಹೆ ಮೇರೆಗೆ ಶಸ್ತ್ರ ಚಿಕಿತ್ಸೆ, ವಿಕಿರಣ ಚಿಕಿತ್ಸೆ, ರಾಸಾಯನಿಕ ಚಿಕಿತ್ಸೆ ಹಾರ್ಮೋನ್ ಥೆರಪಿ ಹಾಗೂ ನೋವು ಉಪಶಮನ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ. ಈ ಎಲ್ಲಾ ಚಿಕಿತ್ಸೆಗಳನ್ನು ಒಂದೇ ಸೂರಿನಡಿ ಒದಗಿಸಲಾಗುತ್ತಿದೆ.

ಆ) ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಅರ್ಬುದ ರೋಗಿಗಳಿಗೆ ಅವರ ಖಾಯಿಲೆಯ ಹಂತದ ಆಧಾರದ ಮೇಲೆ ನುರಿತ ವೈದ್ಯರುಗಳ ಸಲಹೆ ಮೇರೆಗೆ ಈ ಕೆಳಕಂಡ ಚಿಕಿತ್ಸೆಗಳನ್ನು ಒದಗಿಸಲಾಗುತ್ತಿದೆ.

1) ಶಸ್ತ್ರ ಚಿಕಿತ್ಸೆ,
2) ವಿಕಿರಣ ಚಿಕಿತ್ಸೆ,
3) ರಾಸಾಯನಿಕ ಚಿಕಿತ್ಸೆ
4) ಹಾರ್ಮೋನ್ ಥೆರಪಿ
5) ನೋವು ಉಪಶಮನ ಚಿಕಿತ್ಸೆ

ಇ) ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯು ಮುಂಬೈನ ಟಾಟಾ ಸ್ಮಾರಕ ಆಸ್ಪತ್ರೆಯ ಮಾದರಿಯಲ್ಲೇ ಇರುತ್ತದೆ ಹಾಗೂ ಅಲ್ಲಿ ಅರ್ಬುದ ರೋಗಿಗಳಿಗೆ ದೊರೆಯುವ ಎಲ್ಲಾ ಚಿಕಿತ್ಸಾ ಸೌಲಭ್ಯಗಳನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಅಂದರೆ, ಟಾಟಾ ಸ್ಮಾರಕ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ, ವಿಕಿರಣ ಚಿಕಿತ್ಸೆ, ರಾಸಾಯನಿಕ ಚಿಕಿತ್ಸೆ, ನೋವು ಉಪಶಮನ ಚಿಕಿತ್ಸೆ ಹಾಗೂ ವಿವಿಧ ಪ್ರಯೋಗಾಲಯ ವಿಭಾಗಗಳು, ವೈದ್ಯಕೀಯ ದಾಖಿಲಾತಿ ವಿಭಾಗ, ವಿಕಿರಣ ಭೌತ ಶಾಸ್ತ್ರ ವಿಭಾಗ ಸಹ ಇರುತ್ತದೆ ಹಾಗೂ ಹಾಲಿ Disease Management Groups ನಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡುವ ಸೌಲಭ್ಯವನ್ನು ಕಲ್ಪಿಸಲು ಕ್ರಮವಹಿಸಲಾಗಿದೆ.

ಈ) ಆಸ್ಪತ್ರೆಗೆ ಹೊರ ರೋಗಿಗಳಾಗಿ ಬರುವವರು ಒಂದೇ ದಿನದಲ್ಲಿ ವೈದ್ಯರನ್ನು ಭೇಟಿಯಾಗುವ ವ್ಯವಸ್ಥೆಯು ಸಂಸ್ಥೆಯಲ್ಲಿ ಜಾರಿಯಲ್ಲಿದೆ ಹಾಗೂ ರೋಗಿಗೆ ಚಿಕಿತ್ಸೆ ಪ್ರಾರಂಭವಾಗುವುದಕ್ಕೆ ಮೊದಲು ಕೆಲವು ಕಡ್ಡಾಯ ಪರೀಕ್ಷೆಗಳಿಗೆ ಒಳಪಡಬೇಕಾಗಿರುತ್ತದೆ. ಅರ್ಬುದ ಖಾಯಿಲೆ ದೃಢ ಪಟ್ಟ ನಂತರ ಚಿಕಿತ್ಸೆಯನ್ನು ಮೂರು–ನಾಲ್ಕು ಹಂತದಲ್ಲಿ ಒದಗಿಸಲಾಗುತ್ತಿದೆ. ಈ ಯೋಜನೆಯನ್ನು ಸುಮಾರು 05 ವರ್ಷಗಳ ಹಿಂದೆ ಜಾರಿಗೊಳಿಸಿದ್ದು, ಪ್ರತಿ ನಿತ್ಯ ಸರಾಸರಿ ಸುಮಾರು 130 ರೋಗಿಗಳಿಗೆ ಅನುಕೂಲವಾಗುತ್ತಿದೆ.

ಉ) ಈ ಯೋಜನೆಯಿಂದ ಈವರೆಗೂ ಪ್ರತಿ ದಿನ ಸರಾಸರಿ ಸುಮಾರು 130 ರೋಗಿಗಳು ಈ ಸೌಲಭ್ಯವನ್ನು ಪಡೆಯುತ್ತಿದ್ದಾರೆ.
ಮುಂದುವರೆದು, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯಲ್ಲಿ ಪ್ರತಿನಿತ್ಯ ಸರಾಸರಿ 1700 ರೋಗಿಗಳಿಗೆ ಎಲ್ಲಾ ವಿಧದ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ ಹಾಗೂ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಹೊಸ ರೋಗಿಗಳು	130
ಅನುಸರಿಸುವಿಕೆ (Follow up)	1000
ವಿಕಿರಣಾ ಚಿಕಿತ್ಸೆ	470
ರಾಸಾಯನಿಕ ಚಿಕಿತ್ಸೆ	40
ಶಸ್ತ್ರ ಚಿಕಿತ್ಸೆ	15
ನೋವು ಉಪಶಮನ	45

ಅನುದಾನ ಬಿಡುಗಡೆ

3268 (3677); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಕಳೆದ ಎರಡು ವರ್ಷಗಳಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ಸಮಾಜ ಕಲ್ಯಾಣ ಇಲಾಖೆ ಅಡಿ ಯಾವ ಕಾರ್ಯಕ್ರಮಗಳನ್ನು ಕೈಗೊಂಡಿದೆ; (ವಿವರ ಒದಗಿಸುವುದು);

ಆ) ಈ ಕಾರ್ಯಕ್ರಮಗಳಿಗೆ ಕಳೆದ ಎರಡು ವರ್ಷಗಳಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ಅಂಕಿ ಅಂಶಗಳ ಸಮೇತ ವಿವರಿಸುವುದು);

ಇ) ಗ್ರಾಮೀಣ ಭಾಗವನ್ನೇ ಹೆಚ್ಚಾಗಿ ಹೊಂದಿರುವ ಜಿಲ್ಲಾ ಕೇಂದ್ರಕ್ಕೆ ಇನ್ನಷ್ಟು ಕಾರ್ಯಕ್ರಮಗಳ ಅಗತ್ಯ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಇದಕ್ಕೆ ಕೈಗೊಂಡ ಕ್ರಮಗಳೇನು?